ಸ್ವಾಮಿ ಭಾಸ್ಕರಾನಂದ

ಮೂಲ ಹಿಂದಿ : **ಅಕ್ಷಯ ಕುಮಾರ ಬ್ಯಾನರ್ಜಿ** ಅನು: **ಮಾತಾ ತ್ಯಾಗಮಯೀ**

'ಶ್ರೀರಾಮಕೃಷ್ಣ ವಚನವೇದ'ದಲ್ಲಿ ಭಕ್ತನೊಬ್ಬನು ಕಾಶಿಯಲ್ಲಿದ್ದ ಸಂತರೊಬ್ಬರ ವಿಚಾರವಾಗಿ ಶ್ರೀರಾಮಕೃಷ್ಣರಿಗೆ ತಿಳಿಸುತ್ತಾನೆ. ಅವರು ಆ ಸಂತನ ವಿಚಾರವಾಗಿ ಸಾಕಷ್ಟು ವಿಚಾರಿಸುತ್ತಾರೆ. ಅವರೇ ಸ್ವಾಮಿ ಭಾಸ್ಕರಾನಂದರು. ಮುಂದೆ ಶ್ರೀಮಾತೆ ಶಾರದಾದೇವಿಯವರು ಹಾಗೂ ಸ್ವಾಮಿ ವಿವೇಕಾನಂದರು ಈ ಸಂತರನ್ನು ಭೇಟಿ ಮಾಡಿ, ಅವರ ಆಧ್ಯಾತ್ಮಿಕ ಉನ್ನತಿಯ ಬಗ್ಗೆ ಕೊಂಡಾಡಿದ್ದಾರೆ. ಇವರ ಜೀವನದ ಸಂಕ್ಷಿಪ್ತ ಚರಿತ್ರೆಯನ್ನಿಲ್ಲಿ ನೀಡುತ್ತಿದ್ದೇವೆ. ಅನುವಾದಕಿ ಚಳ್ಳಕೆರೆ ಶ್ರೀ ಶಾರದಾಶ್ರಮದ ಅಧ್ಯಕ್ಷರು.



ಸ್ವಾಮಿ ಭಾಸ್ಕರಾನಂದ ಸರಸ್ವತಿಯರು ೧೯ನೆಯ ಶತಮಾನದಲ್ಲಿ ಕಾಶಿಯಲ್ಲಿದ್ದ ಪ್ರಸಿದ್ಧ ಸಂತರು. ಅವರು ೧೮೩೩ ರಿಂದ ೧೯೯೯ರ ವರೆಗೆ, ೬೬ ವರ್ಷ ಬದುಕಿದ್ದರು. ಅದರಲ್ಲಿ ಅವರು ತಮ್ಮ ಕೊನೆಯ ೩೦ ವರ್ಷಗಳನ್ನು ಕಾಶಿಯಲ್ಲಿದ್ದ ತಮ್ಮ ಆಶ್ರಮ ಆನಂದಬಾಗ್‌ನಲ್ಲಿ ಕಳೆದರು.

ಸ್ವಾಮಿ ಭಾಸ್ಕರಾನಂದರು ಜನಿಸಿದ್ದು ಕಾನ್‌ಪುರ ಜಿಲ್ಲೆಯ ಒಂದು ಸಣ್ಣ ಹಳ್ಳಿಯಲ್ಲಿ. ಬಾಲ್ಯದಿಂದಲೇ ಅವರು ಪ್ರಚಂಡ ಮೇಧಾವಿಯಾಗಿದ್ದರು. ಯೌವನದಲ್ಲೇ ಅವರು ವೇದಾಂತದ ಮಹಾನ್ ಪಂಡಿತರೆಂದು, ಸಂಸ್ಕೃತ ವಿದ್ವಾಂಸರೆಂದು ಪ್ರಖ್ಯಾತರಾಗಿದ್ದರು. ವೇದಾಂತ ಶಾಸ್ತ್ರವು ಅವರ ಮನಸ್ಸು-ಬುದ್ಧಿಗಳನ್ನು ತುಂಬಿಕೊಂಡಿತ್ತು. ಜಗತ್ತು ತನ್ನೆಲ್ಲ ವೈಭವಗಳ ಹೊರತಾಗಿಯೂ ಕನಸಾಗಿ ಅವರಿಗೆ ಗೋಚರಿಸಿತು. ಭಗವಂತನ ಕರೆ ಅವರನ್ನು ಅಶಾಂತರನ್ನಾಗಿಸಿತು, ವ್ಯಾಕುಲರನ್ನಾಗಿಸಿತು.

ಅವರು ಜಗತ್ತಿನ ಭೋಗಸುಖಗಳ ಕಡೆಗೆ ವಿರಕ್ತರಾಗಿರುವುದನ್ನು ಗಮನಿಸಿ ಅವರ ತಂದೆ ಅವರಿಗೆ ಮದುವೆಯಾಗುವಂತೆ ಒತ್ತಾಯಿಸಿದರು — ಸುಂದರಿಯಾದ ಪತ್ನಿ, ಗೃಹಸ್ಥ ಜೀವನದ ಭಾರವು ಅವರನ್ನು ಜಗತ್ತಿಗೆ ಕಟ್ಟಿಹಾಕಬಹುದೆಂಬ ಉದ್ದೇಶದಿಂದ, ಮದುವೆಯೂ ಆಯಿತು. ಆದರೆ ಅವರ ಅಂತರಾಳದಲ್ಲಿ ಹೊತ್ತಿಕೊಂಡಿದ್ದ ಬೆಂಕಿ ಕ್ಷಣಿಕವಾದುದಲ್ಲ. ತಮ್ಮ ಪತ್ನಿ ಮಗನಿಗೆ ಜನ್ಮ ನೀಡಿದ ರಾತ್ರಿಯಂದೇ ಅವರು ಕುಟುಂಬ ಜೀವನದ ಕರ್ತವ್ಯಗಳನ್ನು ಪೂರೈಸಿದ ಭಾವನೆಯಿಂದ ಮನೆಯನ್ನು ತೊರೆದು ಹೊರಟುಹೋದರು. ಯುವ ಪತ್ನಿ, ನವಜಾತ ಶಿಶುವಿನ ಮುಗ್ಧ ಮುಖ, ತಾಯ್ತಂದೆಯರ ವಾತ್ಸಲ್ಯಪೂರ್ಣ ಬಂಧನ, ತನ್ನ ಉಜ್ಜ್ವಲವಾದ ಭವಿಷ್ಯ — ಇವು ಯಾವುವೂ ಅವರ ಮನಸ್ಸನ್ನು ಆಕರ್ಷಿಸಲಿಲ್ಲ. ಆಗ ಅವರಿಗೆ ಕೇವಲ ೧೮ ವರ್ಷ.

ಆಧ್ಯಾತ್ಮಿಕ ತೃಷೆಯಿಂದ ಮೋತಿರಾಮ (ಅವರ ಪೂರ್ವಾಶ್ರಮದ ಹೆಸರು) ಶಾಂತಿಯ ಬೆಳಕನ್ನು ಅರಸುತ್ತ ಕೆಲವು ಕಾಲ ಪರಿವ್ರಾಜಕರಾಗಿ ಸಂಚರಿಸಿದರು. ಅವರು ಐತಿಹಾಸಿಕ ಪ್ರಸಿದ್ಧ ನಗರಿಯಾದ ಉಜ್ಜಯಿನಿಗೆ ಹೋದರು. ಅಲ್ಲಿನ ಅಧಿಷ್ಠಾತೃದೇವ ಮಹಾಕಾಲನಿಗೆ ಮನಸೋತು ಅಲ್ಲಿಯೇ ನೆಲೆಸಿದರು. ಅವರು ಏಕನಿಷ್ಠೆಯಿಂದ ಶಿವಪೂಜೆಯಲ್ಲಿ ಶರಣಾದರು. ಅವರು ಶಿವಮಯರೇ ಆದರು. ಆದರೆ ಅವರಿಗೆ ಪೂರ್ಣ ತೃಪ್ತಿಯಾಗಲಿಲ್ಲ.

ಅವರು ಯೋಗಸಾಧನೆಗಳನ್ನು ಶಿಸ್ತುಬದ್ಧವಾಗಿ ಮಾಡಲು ನಿರ್ಧರಿಸಿದರು. ಆದರೆ ಗುರುವನ್ನು ಎಲ್ಲಿ ಹುಡುಕುವುದು? ಆ ಸಂದರ್ಭದಲ್ಲಿ ಸಂತಶ್ರೇಷ್ಠರಾದ ಪರಮಹಂಸ ಪೂರ್ಣಾನಂದ ಸರಸ್ವತಿಯವರು ತೀರ್ಥಯಾತ್ರೆಯನ್ನು ಮಾಡುತ್ತ ಉಜ್ಜಯಿನಿಗೆ ಬಂದಿದ್ದರು. ಅವರು ಮಹಾಯೋಗಿಗಳು. ವೃದ್ಧ ಸಾಧು ಹಾಗೂ ಯುವ ಸಾಧಕರಿಬ್ಬರೂ ಪರಸ್ಪರ ಆಕರ್ಷಿತರಾದರು. ಮೋತಿರಾಮರು ಗುರುವಿನಿಂದ ಯೋಗದೀಕ್ಷೆಯನ್ನು ಪಡೆದು ತಮ್ಮ ಸ್ವಭಾವಸಹಜ ಉತ್ಸಾಹದಿಂದ ಯೋಗಸಾಧನೆಯಲ್ಲಿ ಮಗ್ನರಾದರು. ಅವರ ದೇಹ, ಮನ, ಬುದ್ಧಿಗಳು ಯೋಗಸಾಧನೆಗೆ ಅತ್ಯಂತ ಯೋಗ್ಯ, ಉತ್ತಮ ಅಧಿಕಾರಿಯಾಗಿದ್ದವು. ಆದ್ದರಿಂದ ಕೆಲವೇ ವರ್ಷಗಳಲ್ಲಿ ಅವರು ಅದ್ಭುತ ಮನೋಭೂಮಿಕೆಯನ್ನು ಪಡೆದರು. ಅನೇಕ ಅದ್ಭುತ ಅತೀಂದ್ರಿಯ ಶಕ್ತಿಗಳನ್ನು ಪಡೆದುಕೊಂಡರು. ಆದರೆ ಅವರು ಅವುಗಳಿಂದ ಮುಗ್ಧರಾಗಲಿಲ್ಲ. ಅವನ್ನೂ ಮೀರಿ ಬೆಳೆದರು. ಅವರ ಆತ್ಮವು ದೇಹ-ಮನ-ಬುದ್ಧಿಗಳ ಬಂಧನದಿಂದ ಮುಕ್ತವಾಯಿತು. ತಮ್ಮ ಸ್ವಸ್ವರೂಪದಲ್ಲಿ

ನೆಲೆಸಿ ಪರಮಾನಂದವನ್ನು ಪಡೆದರು. ಅವರು ತಮ್ಮನ್ನು ತಾವು ದೇಹ, ಮನಗಳಿಂದ ಪ್ರತ್ಯೇಕವೆಂದು ಸಾಕ್ಷಾತ್ಕರಿಸಿಕೊಂಡರು.

ಯೋಗಸಾಧನೆಯಿಂದ ಅವರು ಅತ್ಯುನ್ನತ ಆಧ್ಯಾತ್ಮಿಕ ಸ್ತರವನ್ನು ತಲುಪಿದಾಗ ಗುರುವಿನಿಂದ ಸಂನ್ಯಾಸವನ್ನು ತೆಗೆದುಕೊಂಡರು. ಆಗ ಅವರಿಗೆ ೨೭ ವರ್ಷ. ಗುರು ಅವರಿಗೆ 'ಭಾಸ್ಕರಾನಂದ' ಎಂಬ ನಾಮವನ್ನು ನೀಡಿದರು. ಅವರ ಆಧ್ಯಾತ್ಮಿಕ ಸಿದ್ಧಿ ಅಸಾಧಾರಣವಾಗಿತ್ತು. ತಾವು ಕೈಗೊಂಡ ಪ್ರತಿಯೊಂದು ಸಾಧನಾ ಮಾರ್ಗದಲ್ಲೂ ಅವರು ಅತ್ಯಲ್ಪಕಾಲದಲ್ಲಿ ಸಿದ್ಧಿಯನ್ನು ಪಡೆದರು. ಅವರು ವಿಶ್ವದ ವಿವಿಧತೆಗಳ ಹಿಂದಿನ ಏಕತೆಯನ್ನು ಸಾಕ್ಷಾತ್ಕರಿಸಿಕೊಂಡರು.

ಅವರ ಮನಸ್ಸು ಪ್ರಜ್ಞಾತೀತ ಸ್ತರದಿಂದ ಸಾಮಾನ್ಯ ಸ್ತರಕ್ಕೆ ಇಳಿದಾಗ ಸಮಸ್ತ ಮಾನವತೆಯ ಕಡೆಗೆ, ಪಶುಪಕ್ಷಿಗಳಿಗೆ ಹಾಗೂ ವಿಶ್ವದ ಪ್ರತಿಯೊಂದು ವಸ್ತುವಿನ ಮೇಲೆ ಅತ್ಯಪಾರ ಪ್ರೇಮ ಉದಿಸಿತು. ಏಕೆಂದರೆ ಅವರು ಪ್ರತಿಯೊಂದು ವಸ್ತುವಿನಲ್ಲೂ ಬ್ರಹ್ಮವನ್ನು ದರ್ಶಿಸಿದರು. ಪ್ರತಿಯೊಂದನ್ನು ಅವರು ಭಗವಂತನ ವಿಭೂತಿಯೆಂದು ಕಾಣತ್ತಿದ್ದರು. ಹಿಂದೆ ಬಂಧನ ಮತ್ತು ಶೋಕಕ್ಕೆ ಕಾರಣವೆಂದು ಬಗೆದು ತೊರೆದಂತಹ ಇಂದ್ರಿಯ ಜಗತ್ತಿನ ದ್ವಂದ್ವಗಳು ಈಗ ಸಾಕ್ಷಾತ್ಕಾರದ ನೆಲೆಯಿಂದ ಹೊಸ ರೂಪವನ್ನು ತಾಳಿದವು ಮತ್ತು ಈಗ ಅವು ಭಗವಂತನ ಲೀಲೆಯಿಂದ ಸ್ವೀಕಾರಾರ್ಹವಾದವು.

ಹೀಗೆ ತಮ್ಮ ಸಾಧನೆಯ ಗುರಿಯನ್ನು ತಲುಪಿದ ಸ್ವಾಮಿ ಭಾಸ್ಕರಾನಂದರು ಭಾರತದ ಎಲ್ಲ ಪ್ರಮುಖ ತೀರ್ಥಗಳಿಗೆ ಭೇಟಿಯಿತ್ತರು. ಅವರು ತೀರ್ಥಯಾತ್ರೆಯ ಹೆಚ್ಚಿನ ಭಾಗವನ್ನು ಕಾಲ್ನಡಿಗೆಯಲ್ಲಿಯೇ ಕ್ರಮಿಸಿದರು. ಅವರು ಆಗಿನ ಕಾಲದ ಪ್ರಖ್ಯಾತ ವೇದಾಂತಿಗಳಾದ ಶ್ರೀ ಅನಂತರಾಮ ಶಾಸ್ತ್ರಿಯವರನ್ನು ಭೇಟಿಯಾಗಿ, ವೇದಾಂತಶಾಸ್ತ್ರವನ್ನು ಇನ್ನಷ್ಟು ಆಳವಾಗಿ ವಿಸ್ತಾರವಾಗಿ ಅಧ್ಯಯನ ಮಾಡಿದರು. ಯಾತ್ರೆಯನ್ನು ಮುಗಿಸಿ ಅವರು ವಾರಣಾಸಿಯಲ್ಲಿ ಉಳಿದುಕೊಂಡರು. ಅದು ಬಹುಶಃ ದೈವಾಜ್ಞೆಯಿಂದಿರಬಹುದು. ಅವರು ಅಲ್ಲಿನ ಸಮಾಜಕ್ಕೆ ಗುರುವಾಗಬೇಕಿತ್ತು. ಯಾವುದೇ ಪೂರ್ವಯೋಜನೆಯಿಲ್ಲದೆ ಅವರು ಕಾಶಿಯಿಂದ ಆಕರ್ಷಿಸಲ್ಪಟ್ಟರು.

ತಾವು ವಾರಣಾಸಿಯಲ್ಲಿದ್ದ ಮೊದಲ ವರ್ಷಗಳಲ್ಲಿ ಅವರು ತರುತಲವಾಸವನ್ನು ಮಾಡುತ್ತ ಹಗಲಿರಳೆನ್ನದೆ ನಿರಂತರ ಧ್ಯಾನಸ್ಥರಾಗಿರುತ್ತಿದ್ದರು. ಬೇಸಿಗೆಯ ತೀಕ್ಷ್ಣ ಸೂರ್ಯಕಿರಣಗಳು, ಚಳಿಗಾಲದ ಶೀತಲ ಮಾರುತಗಳು, ವರ್ಷಋತುವಿನ ಗುಡುಗು-ಮಿಂಚು-ಮಳೆ-ಬಿರುಗಾಳಿ- ಇವು ಯಾವುವೂ ಅವರ ಗಾಢವಾದ ಧ್ಯಾನಶೀಲ ಮನೋವೃತ್ತಿಯನ್ನು ವಿಚಲಿತಗೊಳಿಸಲಿಲ್ಲ. ಕೆಲವೊಮ್ಮೆ ಅವರು ಭಗವತ್ಪ್ರೇಮದಿಂದ ಮತ್ತರಾಗಿ ಗಟ್ಟಿಯಾಗಿ 'ಶಿವ, ಶಿವ, ವಿಶ್ವನಾಥ, ವಿಶ್ವನಾಥ' ಎಂದು ಕೂಗುತ್ತಿದ್ದರು. ಅವರು ಯಾವತ್ತೂ ಭಿಕ್ಷೆಗೆ ಹೋಗಲಿಲ್ಲ. 'ಯದೃಚ್ಛಾಲಾಭ ಸಂತುಷ್ಟೋ..' ಎಂದು ದೊರೆತ ಆಹಾರದಲ್ಲಿ ತೃಪ್ತರಾಗಿರುತ್ತಿದ್ದರು. ಶರೀರದ ಸುಖಕ್ಕಾಗಿ ಅವರು ಯಾವ ಪ್ರಯತ್ನವನ್ನೂ ಮಾಡುತ್ತಿರಲಿಲ್ಲ.

ಅವರು ಕೌಪೀನವನ್ನೂ ಬಿಟ್ಟರು. ಕಾವಿವಸ್ತ್ರವನ್ನೂ ಬಿಟ್ಟರು. ತಾಯಿಯ ಮಡಿಲಲ್ಲಿರುವ ಮುಗ್ಧ ಮಗುವಿನಂತೆ ನಗ್ನವಾಗಿರತೊಡಗಿದರು. ಸುತ್ತಮುತ್ತಲ ಜಗತ್ತಿನ ಪರಿವೆ ಅವರಿಗಿರಲಿಲ್ಲ. ಧಾರ್ಮಿಕ ಒಲವಿನಿಂದೊಡಗೂಡಿ ಅಥವಾ ಕುತೂಹಲವಶರಾಗಿ ಅಸಂಖ್ಯ ಜನ ಅವರನ್ನು ಮುತ್ತತೊಡಗಿದರು. ದಿನೇ ದಿನೇ ಸಂದರ್ಶಕರ ಸಂಖ್ಯೆ ಬೆಳೆಯತೊಡಗಿತು. ಕೆಲವರು ಅವರ ಅಭಿಮಾನಿಗಳಾದರು, ಶಿಷ್ಯರಾದರು. ಜನಸಂದಣಿಯಿಂದ ತಪ್ಪಿಸಿಕೊಳ್ಳಲು ಸ್ವಾಮೀಜಿ ಏಕಾಂತ ಸ್ಥಳಕ್ಕೆ ಹೋಗಬಯಸಿದರು. ಉದಾರಿಯೂ, ಸಜ್ಜನನೂ ಆದ ಅವಧದ ರಾಜನ ವಿನಂತಿಯ ಮೇರೆಗೆ ಅವರು ಆನಂದಬಾಗ್ ಎಂದು ಕರೆಯಲ್ಪಡುವ ಅವನ ವಿಶಾಲವಾದ, ಏಕಾಂತವಾದ ಉದ್ಯಾನದಲ್ಲಿ ವಾಸಿಸಲಾರಂಭಿಸಿದರು. ಅದು ಇದ್ದದು ಪವಿತ್ರ ವಾರಣಾಸಿಯಲ್ಲಿಯೇ.

ಅವರ ಅನುಕೂಲಕ್ಕಾಗಿ ರಾಜ ತಕ್ಕ ವ್ಯವಸ್ಥೆಯನ್ನು ಮಾಡಿದನು. ಆದರೆ ಅವರಿಗೆ ಯಾವುದೇ ಅಪೇಕ್ಷೆಗಳಿರಲಿಲ್ಲ. ಅವರಿಗೆ ಯಾವುದೇ ಸೇವೆಯ ಅಗತ್ಯವಿರಲಿಲ್ಲ. ಅವರು ತಮ್ಮ ಆನಂದ ಸ್ವರೂಪದಲ್ಲಿ ಪ್ರತಿಷ್ಠಿತರಾಗಿದ್ದು, ತುಂಬಿದ ಸಮುದ್ರದಂತಿದ್ದರು. ಈ ಹೊತ್ತಿಗೆ ಅವರ ಶರೀರವು ಮೂಳೆಚಕ್ಕಳವಾಗಿದ್ದರೂ, ಅದು ಬಾಹ್ಯ ಪರಿಸರದ ಶೀತೋಷ್ಣಗಳನ್ನು ಸಹಿಸಬಲ್ಲುದಾಗಿತ್ತು.

ಅವರು ಸಮಾಜದ ದೃಷ್ಟಿಯಿಂದ ಗುಪ್ತವಾಗಿ ಇರಬಯಸಿದರೂ, ಅವರ ಅಪಾರ ಕರುಣೆ, ದಿವ್ಯಗುಣಗಳು ಹಾಗೂ ಮಹಿಮಾಪೂರ್ಣ ಆತ್ಮಶ್ರೀಯಿಂದಾಗಿ, ಜಾತಿ-ಮತ-ಪಂಥ-ಲಿಂಗ ಬೇಧವಿಲ್ಲದೆ ಸಮಾಜದ ಎಲ್ಲ ಬಗೆಯ ಜನ ಅವರಿಂದ ಆಕರ್ಷಿತರಾದರು. ಅವರ ಮಹಾಸಮಾಧಿಗೆ ಕೆಲವು ವರ್ಷಗಳ ಮೊದಲು ಅವರು ಇಡೀ ವಾರಣಾಸಿಯ ಗಮನವನ್ನು ಸೆಳೆದಿದ್ದರು. ತ್ರೈಲಂಗ ಸ್ವಾಮಿಗಳ ತರುವಾಯ ಅವರು ವಾರಣಾಸಿಯ ಸಂತಶ್ರೇಷ್ಠರಾಗಿದ್ದರು. ರಾಜ-ಮಹಾರಾಜರು, ಜಮೀನ್ದಾರರು, ವ್ಯಾಪಾರಿಗಳು, ಉನ್ನತ ಅಧಿಕಾರಿ ವರ್ಗದವರು, ಭಿಕ್ಷುಗಳು ಸಾಧುಗಳು, ಯಾತ್ರಿಗಳು, ಆರ್ತರು, ದುಃಖಿಗಳು, ಜಿಜ್ಞಾಸುಗಳು — ಎಲ್ಲರೂ ಅವರ ದರ್ಶನಕ್ಕಾಗಿ ಹಾತೊರೆಯುತ್ತಿದ್ದರು. ಯೂರೋಪಿಯನ್ನರು, ಅಮೆರಿಕನ್ನರು ತಮಗೆ ಗೊತ್ತಿಲ್ಲದ ಯಾವುದೋ ಕಾರಣಕ್ಕೆ ಭಾರತದ ಈ ನಗ್ನ ಸಂನ್ಯಾಸಿಯಿಂದ ಆಕರ್ಷಿತರಾಗಿದ್ದರು. ವಿದೇಶದಿಂದ ಆಗಮಿಸಿದ ಯಾತ್ರಿಗಳು ಅವರನ್ನು ಸಂದರ್ಶಿಸದೆ ಹೋಗುತ್ತಿರಲಿಲ್ಲ. ಸ್ವಾಮಿ ವಿವೇಕಾನಂದರು ತಮ್ಮ ಪರಿವ್ರಜನದ ಕಾಲದಲ್ಲಿ ವಾರಣಾಸಿಗೆ ಹೋದಾಗ ಸ್ವಾಮಿ ಭಾಸ್ಕರಾನಂದರನ್ನು ಭೇಟಿಯಾಗಿದ್ದರು. ಶ್ರೀಮಾತೆ ಶ್ರೀ ಶಾರದಾದೇವಿಯವರು ವಾರಣಾಸಿಗೆ ಹೋದಾಗ ಸ್ವಾಮಿ ಭಾಸ್ಕರಾ

ನಂದರನ್ನು ಭೇಟಿಯಾಗಿದ್ದರು. ಶ್ರೀಮಾತೆಯವರು ಅವರನ್ನು ಕುರಿತು, ''ಎಂಥ ನಿರ್ವಿಕಾರ ಮಹಾಪುರುಷರು! '' ಎಂದು ಉದ್ಗರಿಸುತ್ತಾರೆ.

ಅವರ ಮಹಿಮಾನ್ವಿತ ಕಥೆಯು ಭಾರತದ ವೃತ್ತಪತ್ರಿಕೆಗಳಲ್ಲಿ ಮಾತ್ರವಲ್ಲ, ಯೂರೋಪ್-ಅಮೆರಿಕಗಳ ಪತ್ರಿಕೆಗಳಲ್ಲೂ ಪ್ರಕಟವಾಯಿತು. ಭಾರತ ಪ್ರವಾಸಕ್ಕೆಂದು ಆಗಮಿಸಿದ ಅಮೆರಿಕದ ಖ್ಯಾತ ಬರಹಗಾರ ಮಾರ್ಕ ಟ್ವೇನ್ ಅವರನ್ನು ಕುರಿತು ಸವಿಸ್ತಾರವಾಗಿ ಬರೆದನು. ನೀವು ಭಾರತದಲ್ಲಿ ದರ್ಶಿಸಿದ ಗಮನಾರ್ಹವಾದ ವಸ್ತು ಯಾವುದು ಎಂದು ಅವನನ್ನು ಪ್ರಶ್ನಿಸಿದಾಗ ಅವನು, ''ನಾನು ನೋಡಿದ ವಿಶಿಷ್ಟ ವಸ್ತು ಬನಾರಸ್ ಮತ್ತು ಅಲ್ಲಿ ನಾನು ಭೇಟಿಯಾದ ಸಂತ... ತನ್ನ ಪಾವಿತ್ರ್ಯದಿಂದ ಅವನು ಭಾರತದ ಉದ್ದಗಲಕ್ಕೂ ಪೂಜಿಸಲ್ಪಡುತ್ತಿರುವ ವ್ಯಕ್ತಿ ಅವನು'' ಎನ್ನುತ್ತಾನೆ.

ಓರ್ವ ಆಂಗ್ಲ ಮಹಿಳೆ, ಅವರ ಅಭಿಮಾನಿ, ಅವರ ಮಹಾಸಮಾಧಿಯ ವಿಷಯವನ್ನು ಕೇಳಿ ಬರೆಯುತ್ತಾಳೆ: ''ಸ್ವಾಮಿ ಭಾಸ್ಕರಾನಂದರದು ಮಧ್ಯಮ ಗಾತ್ರ, ಮುಂಡನಗೈದ ಶಿರ, ಹಲ್ಲುಗಳಿಲ್ಲದ ಬೊಚ್ಚು ಬಾಯಿ, ನಗ್ನ ಶರೀರ. ಅವರ ಶರೀರದ ಪ್ರತಿಯೊಂದು ಮೂಳೆಯೂ ಎದ್ದು ಕಾಣುತ್ತಿತ್ತು. ಆದರೆ ಅವರಲ್ಲಿ ಅಸಾಮಾನ್ಯ ರಾಜಗಾಂಭೀರ್ಯವೂ, ಅಪಾರ ಸೌಜನ್ಯವೂ, ಪರಮ ಪರಿಶುದ್ಧವಾದ ಸರಳತೆಯೂ ಆವಿರ್ಭವಿಸಿತ್ತು. ಅಂತಹ ವ್ಯಕ್ತಿಗಳಲ್ಲಿ ನಾವು ಊಹಿಸಬಹುದಾದ ಅಭಿಮಾನದ ಅಥವಾ ಪೊಳ್ಳು ವಿನಯದ ಲಕ್ಷಣಗಳು ಅವರಲ್ಲಿರಲಿಲ್ಲ. ಬದಲಾಗಿ ಅವರ ದೀಪ್ತ ಮುಖದಲ್ಲಿ ಕೃಪಾಪೂರ್ಣ ಸತ್ವವಿದ್ದಿತು. ಅದು ಅವರ ಒಳಗಿನ ಪೂರ್ಣ ತೃಪ್ತಿಯ ಸೂಚಕವಾಗಿತ್ತು.... ಜಡ ಜಗತ್ತಿನ ಮೇಲೆ ಆತ್ಮದ ಪ್ರಭುತ್ವಕ್ಕೆ ಅವರೊಂದು ಜೀವಂತ ಉದಾಹರಣೆಯಾಗಿದ್ದರು. ಅವರ ಅಪಾರ ತಪೋನಿಷ್ಠೆಯು ಮಾನವತೆಗೆ ವರದಾನವಾಗಿತ್ತು.'' *(ಕೃಪೆ: ಕಲ್ಯಾಣ ಕಲ್ಪತರು - ಜುಲೈ ೨೦೧೭)*



ಭ್ರಾತೃಪ್ರೇಮ

ಸ್ವಾಮಿ ವಿವೇಕಾನಂದರು ಮೊದಲ ಸಾರಿ ವಿಲಾಯಿತಿಯಿಂದ ಹಿಂದಿರುಗಿ ಬಂದು ಕೆಲವು ದಿವಸ ಕಾಶೀಪುರದ ಗೋಪಾಲಲಾಲ ತೋಟದಲ್ಲಿ ಇದ್ದರು. ಸ್ವಾಮೀಜಿಯವರ ಪ್ರಖ್ಯಾತಿ ಆಗ ಭರತ ಖಂಡದ ಒಂದು ತುದಿಯಿಂದ ಮತ್ತೊಂದು ತುದಿಯವರೆಗೂ ಪ್ರತಿಧ್ವನಿತವಾಗುತ್ತಿತ್ತು. ಕಲ್ಕತ್ತೆಯ ಬಡೋಬಜಾರಿನಲ್ಲಿ ಬಹಳ ಮಂದಿ ಪಂಡಿತರು ವಾಸಿಸುತ್ತಿದ್ದರು. ಈ ವೇದಶಾಸ್ತ್ರಜ್ಞರಾದ ಪಂಡಿತರೆಲ್ಲಾ ಈ ಕಾಲದಲ್ಲಿ ಸ್ವಾಮಿಗಳ ಕೀರ್ತನೆಯನ್ನು ಕೇಳಿದ್ದರು. ಅವರಲ್ಲಿ ಕೆಲವರು ದೊಡ್ಡ ಪಂಡಿತರು ಸ್ವಾಮಿಗಳೊಡನೆ ವಾಕ್ಯಾರ್ಥ ಮಾಡುವ ಅಭಿಲಾಷೆಯಿಂದ ಒಂದು ದಿನ ಈ ತೋಟಕ್ಕೆ ಬಂದರು. ಬಂದಿದ್ದ ಪಂಡಿತರೆಲ್ಲಾ ಸಂಸ್ಕೃತ ಭಾಷೆಯಲ್ಲಿ ನಿರರ್ಗಳವಾಗಿ ಮಾತನಾಡುವ ಸಾಮರ್ಥ್ಯವುಳ್ಳವರಾಗಿದ್ದರು. ಅವರು ಬಂದಕೂಡಲೆ ಗುಂಪಿನಿಂದ ಸುತ್ತುವರಿಯಲ್ಪಟ್ಟಿದ್ದ ಸ್ವಾಮಿಗಳನ್ನು ಮಾತನಾಡಿಸಿ ಅವರೊಡನೆ ಸಂಸ್ಕೃತದಲ್ಲಿ ಮಾತು ಮೊದಲು ಮಾಡಿದರು. ಸ್ವಾಮೀಜಿ ಸಂಸ್ಕೃತದಲ್ಲಿಯೇ ಅವರಿಗೆ ಉತ್ತರ ಕೊಡುತ್ತಿದ್ದರು. ಸ್ವಾಮೀಜಿಯವರು ಹಿಂದೆ ಆರು ವರ್ಷಗಳ ಕಾಲ ಯುರೋಪ್ ಮತ್ತು ಅಮೆರಿಕಾದಲ್ಲಿ ಇದ್ದಾಗ ಸಂಸ್ಕೃತ ಮಾತನಾಡುವುದಕ್ಕೆ ಅವಕಾಶ ದೊರೆಯದಿದ್ದರೂ, ಈಗ ಅವರ ಸಂಸ್ಕೃತ ನುಡಿಗಳು ಪಂಡಿತರ ಮಾತಿಗಿಂತ ಕಿವಿಗೆ ಇಂಪಾಗಿಯೂ, ಸುಲಲಿತವಾಗಿಯೂ ಇತ್ತೆಂದು ಸ್ವತಃ ಪಂಡಿತರೇ ನಂತರ ಒಪ್ಪಿಕೊಂಡರು.

ಪಂಡಿತರೊಡನೆ ಸ್ವಾಮಿಗಳಿಗೆ ಜಟಿಲ ವಿಚಾರ ಹತ್ತಿಕೊಂಡಾಗ, ಅವರು ಕುಳಿತಿದ್ದ ತೊಟ್ಟಿಗೆ ಉತ್ತರದಲ್ಲಿದ್ದ ಕೊಠಡಿಯಲ್ಲಿ ರಾಮಕೃಷ್ಣಾನಂದ ಸ್ವಾಮಿಗಳು ಜಪಮಾಡುತ್ತಿದ್ದರು. ಪಂಡಿತರೆಲ್ಲರೂ ಹೊರಟುಹೋದ ಮೇಲೆ ಇದಕ್ಕೆ ಕಾರಣವನ್ನು ವಿಚಾರ ಮಾಡಿದಾಗ, ಸ್ವಾಮಿಗಳಿಗೆ ವಿಜಯವಾಗುವುದಕ್ಕಾಗಿಯೆ ಒಂದೇ ಮನಸ್ಸಿನಿಂದ ಪರಮಹಂಸರ ಪಾದಪದ್ಮದಲ್ಲಿ ಅವರು ಪ್ರಾರ್ಥನೆ ಮಾಡುತ್ತಿದ್ದರೆಂದು ತಿಳಿದು ಬಂತು!

ಸ್ವಾಮೀಜಿಯವರ ಮೇಲೆ ಅವರ ಗುರುಭ್ರಾತೃಗಳಿಗೆ ಯಾವಾಗಲೂ ಎಂಥ ಅದ್ಭುತವಾದ ಪ್ರೀತಿ ಇರುತ್ತಿತ್ತು !

(ಸಂಗ್ರಹ: ಸ್ವರ್ಣಗೌರಿ)